# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1008 |
| ಸದಸ್ಯರ ಹೆಸರು | ಶ್ರೀ ರವಿಕುಮಾರ್ ಎನ್ |
| ಉತ್ತರಿಸಬೇಕಾದ ದಿನಾಂಕ | 18.12.2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2015 ಜನವರಿ 9ರ ಬಳಿಕ ಬೆಂಗಳೂರು ನಗರ ಜಿಲ್ಲೆ ಯ ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79ರಲ್ಲಿ 15 ಎಕರೆ 12 ಗುಂಟೆ ಜಮೀನಿಗೆ ಸಂಬಂಧಿಸಿ ದಂತೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಮಾರಾಟ ಮತ್ತು ಖರೀದಿ ನೋಂದಣಿ ಪ್ರಕ್ರಿಯೆ ಗಳನ್ನು ನೋಂದಣಿ ಮಾಡಿರುವ ಉಪನೋಂದ ಣಾಧಿಕಾರಿಗಳ ಮೇಲೆ ಅಗತ್ಯ ಇಲಾಖಾ ಕ್ರಮ ಕೈಗೊಳ್ಳುವಂತೆ ಸಂಬಂಧಿತ ಇಲಾಖಾ ಅಧಿಕಾರಿಗಳಿಗೆ ಮುಜರಾಯಿ ಆಯುಕ್ತರು ಪತ್ರ ಬರೆದಿರುವರೇ: ಯಾವ ದಿನಾಂಕದಂದು ಪತ್ರ ಬರೆಯಲಾಗಿದೆ: ಇಲ್ಲವಾದಲ್ಲಿ ಅಂತಹ ಉಪ ನೋಂದಣಾಧಿಕಾರಿಗಳನ್ನು ಅಮಾನತ್ತು ಮಾಡಲು ಶಿಫಾರಸ್ಸು ಮಾಡಲಾಗುವುದೇ? (ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲೆ ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79ರಲ್ಲಿ 15-12 ಎಕರೆ/ಗುಂಟೆ ಜಮೀನಿಗೆ ಸಂಬಂಧಿಸಿದಂತೆ, ಉಪನೋಂದಣಾಧಿಕಾರಿಗಳು ಕೆ.ಹೆಚ್ ರಸ್ತೆ ಸುಧಾಮನಗರ (ಶಾಂತಿನಗರ) ಬೆಂಗಳೂರು ರವರಿಗೆ ಪ್ರಸ್ತಾಪಿತ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು, ದಿನಾಂಕ:10/08/2020 ರಂದು ಪತ್ರ ಬರೆದು ಸರ್ವೆ ನಂಬರ್ 79ರಲ್ಲಿ 15-12 ಎಕರೆ/ಗುಂಟೆ ಜಮೀನಿನಲ್ಲಿರುವ ಮನೆಗಳು, ಕಟ್ಟಡ, ಶೆಡ್‌ಗಳಿಗೆ ನೋಂದಣಿ ಕಛೇರಿಯಿಂದ ಯಾವುದೇ ದಾಸ್ತಾವೇಜುಗಳು, ಕ್ರಯಪತ್ರಗಳು ಮತ್ತು ನೋಂದಾಯಿತ ದಾಖಲೆಗಳು ಇದ್ದಲ್ಲಿ ಅದರ ಧೃಡೀಕೃತ ಪ್ರತಿಗಳನ್ನು ತ್ವರಿತವಾಗಿ ಕಛೇರಿಗೆ ಸಲ್ಲಿಸುವಂತೆ ಮತ್ತು ಇನ್ನು ಮುಂದೆ ಸದರಿ ಜಮೀನಿಗೆ ಸಂಬಂಧಿಸಿದಂತೆ ಧಾರ್ಮಿಕ ದತ್ತಿ ಇಲಾಖೆಯ ಅನುಮತಿ ಇಲ್ಲದೇ ಯಾವುದೇ ಅನಧಿಕೃತ ಒತ್ತುವರಿದಾರರಿಗೆ ದಾಸ್ತಾವೇಜುಗಳನ್ನು ಕ್ರಯ ಪತ್ರಗಳನ್ನು ಮತ್ತು ಇತರೆ ಯಾವುದೇ ಹೊಸ ದಾಖಲೆಗಳನ್ನು ನೋಂದಾವಣೆ ಮಾಡದಂತೆ ತಿಳಿಸಿರುತ್ತಾರೆ.<br><br>ಪ್ರಸ್ತಾಪಿತ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲ್ಕಂಡಂತೆ ಕೋರಿರುವ ದಾಖಲೆಗಳು ಉಪನೋಂದಣಾಧಿಕಾರಿಗಳ ಕಛೇರಿಯಿಂದ ಸ್ವೀಕೃತವಾಗದ ಹಿನ್ನಲೆಯಲ್ಲಿ ಸರ್ವೆ ನಂಬರ್ 79ರಲ್ಲಿ 15-12 ಎಕರೆ/ಗುಂಟೆ ಜಮೀನಿಗೆ ಸಂಬಂಧಿಸಿದಂತೆ, ಮಾರಾಟ ಮತ್ತು ಖರೀದಿ ನೋಂದಣಿ ಪ್ರಕ್ರಿಯೆಗಳನ್ನು ನೋಂದಣಿ ಮಾಡಿರುವ ಉಪನೋಂದಣಾಧಿಕಾರಿಗಳ ವಿರುದ್ಧ ಕಾನೂನಾತ್ಮಕವಾಗಿ ಶಿಸ್ತು ಕ್ರಮವನ್ನು ಕೈಗೊಂಡು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಗೆ ಮಾಹಿತಿ ನೀಡುವಂತೆ ಐ.ಜಿ.ಆರ್, ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಬೆಂಗಳೂರು ರವರಿಗೆ ದಿನಾಂಕ:05-12-2024ರಂದು ಪತ್ರ ಬರೆಯಲಾಗಿರುತ್ತದೆ. |
| ಆ) | ಸದರಿ ಜಮೀನಿನಲ್ಲಿ ಮನೆ ಕಟ್ಟಲು ಅನುಮತಿ ನೀಡಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಕೋರಿ ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆಯಲಾಗಿದೆಯೇ: ಇಲ್ಲವಾದಲ್ಲಿ ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು | ಬಿಬಿಎಂಪಿ ವತಿಯಿಂದ ಬೆಂಗಳೂರು ನಗರ ಜಿಲ್ಲೆ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸ.ನಂ 79 ರ ವಿಸ್ತೀರ್ಣದ 15-12 ಎಕರೆ/ಗುಂಟೆ ಪ್ರಶ್ನಿತ ಸ್ವತ್ತಿಗೆ ಮುಂದೆ ಯಾವುದೇ ಖಾತೆ ಮಾಡಿರುವುದಿಲ್ಲವೆಂದು ಸಹಾಯಕ ಕಂದಾಯ ಅಧಿಕಾರಿ (ಶಾಂತಿನಗರ) ಉಪವಿಭಾಗ, ಎಂ.ಜಿ.ರಸ್ತೆ, ಬೆಂಗಳೂರು ರವರು ಪ್ರಸ್ತಾಪಿತ ದೇವಾಲಯದ |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| | | ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ: 03/02/2021 ರಂದು ಪತ್ರವನ್ನು ಬರೆದಿರುತ್ತಾರೆ.<br><br>ಈ ಹಿನ್ನೆಲೆಯಲ್ಲಿ ಅಪರ ಜಿಲ್ಲಾಧಿಕಾರಿಗಳು ಮತ್ತು ಉಪ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ರವರು ದಿನಾಂಕ:16/04/2021 ರಂದು ಸಹಾಯಕ ಕಂದಾಯ ಅಧಿಕಾರಿಗಳು ಬಿಬಿಎಂಪಿ, ಎಂ.ಜಿ.ರಸ್ತೆ, ಬೆಂಗಳೂರು ರವರಿಗೆ ಪತ್ರ ಬರೆದು ಸದರಿ ಪ್ರಶ್ನಿತ ಸ್ವತ್ತಿಗೆ ಈವರೆವಿಗೂ ಎಷ್ಟು ಖಾತೆಗಳನ್ನು ಮಾಡಲಾಗಿದೆ ಮತ್ತು ಖಾತೆಗಳನ್ನು ಮಾಡಲು ಇಲಾಖೆಯಿಂದ ಅನುಮತಿಯನ್ನು ಪಡೆಯಲಾಗಿದೇಯೇ? ಖಾತೆಗಳನ್ನು ಮಾಡಲು ಅನುಸರಿಸಿದ ಮಾನದಂಡಗಳೇನು? ಒಂದು ವೇಳೆ ಇಲಾಖೆಯಿಂದ ಅನುಮತಿಯನ್ನು ಪಡೆಯದೆಯೇ ಸದರಿ ಪ್ರಶ್ನಿತ ಸ್ವತ್ತಿಗೆ ಖಾತೆಗಳನ್ನು ಮಾಡಿದಲ್ಲಿ ಖಾತೆಗಳನ್ನು ರದ್ದು ಮಾಡಲು ಮತ್ತು ಖಾತೆಗಳನ್ನು ಮಾಡಿರುವವರ ವಿರುದ್ಧ ಶಿಸ್ತು ಕ್ರಮ ಕೈಗೊಂಡು ವಿವರವಾದ ವರದಿಯನ್ನು ಸಲ್ಲಿಸಲು ಕೋರಿರುತ್ತಾರೆ.<br><br>ಪ್ರಸ್ತಾಪಿತ ಸ್ವತ್ತಿನಲ್ಲಿ ವಾಸವಿರುವ ಅನಧಿಕೃತ ದಾರರು ತಮ್ಮ ಹೆಸರಿಗೆ ಖಾತೆ ಮಾಡಿಸಲು ಕೋರಿ ತಮ್ಮ ಅಧೀನ ಸಕ್ಷಮ ಪ್ರಾಧಿಕಾರಿಗಳ ಕಛೇರಿಗೆ ಸಲ್ಲಿಸಲಾದ ಎಲ್ಲಾ ದಾಖಲೆಗಳ ದೃಡೀಕೃತ ಪ್ರತಿಗಳನ್ನು ಜರೂರಾಗಿ ಸಲ್ಲಿಸುವಂತೆ ಬಿಬಿಎಂಪಿಯ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಕೋರಿ ಆಯುಕ್ತರು/ ವಿಶೇಷ ಆಯುಕ್ತರು/ಜಂಟಿ ಆಯುಕ್ತರು ಬಿಬಿಎಂಪಿ, ಬೆಂಗಳೂರು ರವರಿಗೆ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಿಂದ ದಿ: 15-09-2021, ದಿ:20-09-2021, 30-11-2021, 22-09-2021, 21-11-2022 ಹಾಗೂ ದಿ:21-04-2022ರಂದು ಪತ್ರ ಬರೆಯಲಾಗಿರುತ್ತದೆ.<br><br>ಪ್ರಸ್ತಾಪಿತ ಸ್ವತ್ತಿನಲ್ಲಿ ಇರುವ ಅನಧಿಕೃತ ಒತ್ತುವರಿದಾರರಿಗೆ ಕಟ್ಟಡವನ್ನು ನಿರ್ಮಿಸಲು, ಬಿ.ಬಿ.ಎಂ.ಪಿ ವತಿಯಿಂದ ಅಗತ್ಯ ದಾಖಲೆಗಳನ್ನು ಮಾಡಿ ಕೊಟ್ಟಿರುವಂತಹ ಅಧಿಕಾರಿಗಳ ವಿರುದ್ಧ ಕಾನೂನಾತ್ಮಕವಾಗಿ ಶಿಸ್ತು ಕ್ರಮವನ್ನು ಕೈಗೊಂಡು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಗೆ ಮಾಹಿತಿ ನೀಡುವಂತೆ ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು ರವರಿಗೆ ದಿನಾಂಕ:05-12-2024 ರಂದು ಪತ್ರ ಬರೆಯಲಾಗಿರುತ್ತದೆ. |
| ಇ) | ಈ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಬೆಸ್ಕಾಂ ಅಧಿಕಾರಿಗಳನ್ನು ಅಮಾನತ್ತು ಕ್ರಮ ಕೈಗೊಳ್ಳಲು ಪತ್ರ ಬರೆಯಲಾಗಿದೆಯೇ? ಇಲ್ಲ ವಾದಲ್ಲಿ ಕ್ರಮಕೈಗೊಳ್ಳುವುದು ಯಾವಾಗ? | ಬೆಂಗಳೂರು ನಗರ ಜಿಲ್ಲೆ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರು ಗ್ರಾಮದ ಸ.ನಂ 79 ರ ವಿಸ್ತೀರ್ಣದ 15-12 ಎಕರೆ/ಗುಂಟೆ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಿರುವ ಬಗ್ಗೆ ಮಾಹಿತಿಯನ್ನು ನೀಡುವಂತೆ ಹಾಗೂ ಇನ್ನೂ ಮುಂದೆ ಇಲಾಖೆಯ ಅನುಮತಿ ಪಡೆಯದೇ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡದಂತೆ ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯ |

| ಕ್ರ ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ಅಭಿಯಂತರರು ಬೆಸ್ಕಾಂ ಆಸ್ಟಿನ್ ಟೌನ್ ಬೆಂಗಳೂರು ರವರಿಗೆ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಿಂದ ದಿ:16-09-2021 ಪತ್ರ ಬರೆಯಲಾಗಿದೆ.<br><br>ಮೇಲ್ಕಂಡಂತೆ ಕೋರಿರುವ ದಾಖಲೆಗಳು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಕೆ.ಆರ್ ಸರ್ಕಲ್ ಬೆಂಗಳೂರು ಕಛೇರಿಯಿಂದ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಗೆ ಸ್ವೀಕೃತವಾಗದ ಹಿನ್ನಲೆ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಅಧಿಕಾರಿಗಳ ವಿರುದ್ಧ ಕಾನೂನಾತ್ಮಕವಾಗಿ ಶಿಸ್ತು ಕ್ರಮವನ್ನು ಕೈಗೊಂಡು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಗೆ ಮಾಹಿತಿ ನೀಡುವಂತೆ ಮುಖ್ಯ ಅಭಿಯಂತರರು, ಬೆಸ್ಕಾಂ, ಅಸ್ಟಿನ್‌ಟೌನ್, ಬೆಂಗಳೂರು ರವರಿಗೆ ದಿನಾಂಕ:05-12-2024ರಂದು ಪತ್ರ ಬರೆಯಲಾಗಿರುತ್ತದೆ. |
| ಈ) | 2015 ಜನವರಿ ಬೆಂಗಳೂರು ನಗರ ಜಿಲ್ಲೆ ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79 ರಲ್ಲಿ 15 ಎಕರೆ 12 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ನೀರಿನ ಸಂಪರ್ಕ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ನೀಡಿದ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಲು ಶಿಫಾರಸ್ಸು ಮಾಡದಿರಲು ಕಾರಣವೇನು? (ವಿವರ ನೀಡುವುದು) | ಪ್ರಸ್ತಾಪಿತ ಸ್ವತ್ತಿನಲ್ಲಿ ಅನಧಿಕೃದಾರರು ಮನೆಗಳನ್ನು ನಿರ್ಮಾಣ ಮಾಡಿ ಬೆಂಗಳೂರು ನೀರು ಮತ್ತು ಒಳಚರಂಡಿ ವ್ಯವಸ್ಥೆ ಸೌಲಭ್ಯ ಪಡೆಯುವ ಮುನ್ನ ಸಲ್ಲಿಸಲಾದ ಎಲ್ಲಾ ಅಗತ್ಯ ದಾಖಲೆ ಮತ್ತು ಮಾಹಿತಿಯನ್ನು ಸಲ್ಲಿಸುವಂತೆ ಅಧೀಕ್ಷಕ ಇಂಜಿನಿಯರ್ ಮುಖ್ಯ ಅಭಿಯಂತರರು/ ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾವೇರಿ ಭವನ, ಬೆಂಗಳೂರು ರವರಿಗೆ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಿಂದ ದಿ:16-09-2021 ಪತ್ರ ಬರೆಯಲಾಗಿದೆ.<br><br>ಮೇಲ್ಕಂಡಂತೆ ಕೋರಿರುವ ದಾಖಲೆಗಳು ಮುಖ್ಯ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ನೀಲಸಂದ್ರ, ಬೆಂಗಳೂರು ರವರಿಂದ ಆಯುಕ್ತರ ಕಛೇರಿಗೆ ಸ್ವೀಕೃತವಾಗದ ಹಿನ್ನಲೆ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ನೀರಿನ ಸಂಪರ್ಕ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿದ ಇಲಾಖಾ ಅಧಿಕಾರಿಗಳ ವಿರುದ್ಧ ಕಾನೂನಾತ್ಮಕವಾಗಿ ಶಿಸ್ತು ಕ್ರಮವನ್ನು ಕೈಗೊಂಡು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಗೆ ಮಾಹಿತಿ ನೀಡುವಂತೆ ಮುಖ್ಯ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕೆ.ಜಿ ರಸ್ತೆ, ಬೆಂಗಳೂರು ರವರಿಗೆ ದಿನಾಂಕ:05-12-2024ರಂದು ಪತ್ರ ಬರೆಯಲಾಗಿರುತ್ತದೆ. |

**ಸಂಖ್ಯೆ: ಕಂಇ 175 ಮುಸಪ್ರ 2024**

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**